ಕರ್ನಾಟಕ ಸರ್ಕಾರ

Govt of Karnataka

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103**

**OFFICE OF THE DEPUTY COMMISSIONER, BAGALAKOTE DISTRICT, BAGALAKOTE- 587103**

**Ph: 08354-235091 Fax: 08354-235096** E-mail:deo.bagalkot@gmail.com

ಕ್ರ:ಕಂಶಾ:ಎಲ್‌ಎಕ್ಯೂ:ಸಿಆರ್-13/15-16 ಬಾಗಲಕೋಟೆ ದಿ: 30-06-2020

ಗೆ,

ಉಪವಿಭಾಗಾಧಿಕಾರಿಗಳು

ಜಮಖಂಡಿ

ವಿಷಯ:ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ನಾಗಣಾಪೂರ ಗ್ರಾಮದ ಕೆಲವು ಜಮೀನುಗಳ ಭೂಸ್ವಾಧೀನತೆಯ ಬಗೆಗಿನ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿಯನ್ನು ಅನುಮೋದಿಸಿದ ಕುರಿತು

ಉಲ್ಲೇಖ:ಆಯುಕ್ತರು, ರಾಜ್ಯ ಪುನರವಸತಿ ಮತ್ತು ಪುನರನಿರ್ಮಾಣ ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಪತ್ರ ಸಂಖ್ಯೆ:ಕಂಇ 30:ಎಲ್‌ಆರ್‌ಆರ್ :2020 ದಿನಾಂಕ:29-06-2020.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತದ್ವಯ ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ **ನಾಗಣಾಪೂರ ಗ್ರಾಮದ 6/7& 24/1** ರ ಈ 1 ಸರ್ವೇ ನಂಬರಗಳನ್ನೊಳಗೊಂಡಂತೆ ಒಟ್ಟು ಕ್ಷೇತ್ರ **40-16-09.5 ಎ/ಗುಂ/ಆ** ಕೆಲವು ಜಮೀನುಗಳ ಭೂಸ್ವಾಧೀನತೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್‌ನಿರ್ಮಾಣ **ಕರಡು ಯಾದಿಯನ್ನು** `**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013**`ರ ಕಲಂ 18 ರಡಿ ಅನುಮೋದಿಸಿದ್ದು, ಸದರಿ ಅನುಮೋದಿತ ಮೂಲ **ಕರಡು ಯಾದಿಯನ್ನು** ಉಲ್ಲೇಖಿತ ಪತ್ರಕ್ಕೆ ಲಗತ್ತಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ **ಮುಂದಿನ ಸೂಕ್ತ ಕ್ರಮವಹಿಸಲು ನಿರ್ದೇಶಿಸಿದ್ದು** ಇರುತ್ತದೆ.

191/9

ಉಲ್ಲೇಖಿತ ಸರಕಾರದ ಪತ್ರವನ್ನು ಹಾಗೂ ಅನುಮೋದಿತ ಪುನರ್ವಸತಿ ಮತ್ತು ಪುನರ್‌ನಿರ್ಮಾಣ **ಮೂಲ ಕರಡು ಯಾದಿಯನ್ನು ಈ ಪತ್ರಕ್ಕೆ** ಲಗತ್ತಿದ್ದು, ಸದರಿ ಸರಕಾರದ ಪತ್ರದಲ್ಲಿ ನಿರ್ದೇಶಿಸಿದಂತೆ **ಅಗತ್ಯ ಕ್ರಮ ಕೈಗೊಳ್ಳಲು** ಹಾಗೂ **ನಿಯಮಾನುಸಾರ** ಕಲಂ 19(1) ರಡಿ ಅಧಿಸೂಚನೆ ತಯಾರಿಸುವ ಕುರಿತು ಸೂಕ್ತ **ಕ್ರಮ ಕೈಗೊಳ್ಳಲು ಸೂಚಿಸಿದೆ.** ಹಾಗೂ ಉಲ್ಲೇಖಿತ ಸರಕಾರದ ಪತ್ರದನ್ವಯ ಕಳುಹಿಸಿದ ಅನುಮೋದಿತ **ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಕರಡು ಯಾದಿಯ** ಪ್ರತಿಯನ್ನು ನಿಯಮಾನುಸಾರ ದಿನಾಂಕ:30-06-2020 **ರಂದು ಈ ಕಾರ್ಯಾಲಯದ ನೋಟೀಸ ಬೋರ್ಡಿಗೆ** ಡಕಾಯಿಸಿ ಪ್ರಸಿದ್ಧಿಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿಗಳು
ಬಾಗಲಕೋಟೆ

**ಪ್ರತಿ:**ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್‌ಆಯ್‌ಸಿ ಬಾಗಲಕೋಟೆ ಇವರಿಗೆ

2/-ಉಲ್ಲೇಖಿತ ಸರಕಾರದ ಪತ್ರದನ್ವಯ ಅನುಮೋದನೆಗೊಂಡ ಪುನರವಸತಿ ಮತ್ತು ಪುನರನಿರ್ಮಾಣದ ಬಗೆಗಿನ ಕರಡು ಯಾದಿಯನ್ನು ಈ ಪತ್ರಕ್ಕೆ ಲಗತ್ತಿಸಿದ್ದು, ಸದರಿ ಕರಡು ಯಾದಿಯನ್ನು ಜಿಲ್ಲಾಧಿಕಾರಿಯವರ ವೆಬ್‌ಸೈಟಿನಲ್ಲಿ ನಿಯಮಾನುಸಾರ ಪ್ರಕಟಪಡಿಸಲು ನಿರ್ದೇಶಿಸಿದೆ.